# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 572 |
| ಸದಸ್ಯರ ಹೆಸರು | : | ಶ್ರೀ ಗೋವಿಂದರಾಜು<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 20.02.2024 |
| ಉತ್ತರಿಸುವ ಸಚಿವರು | : | ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು. |

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ಕಳೆದ 5 ವರ್ಷಗಳ ಅವಧಿಯಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಎಷ್ಟು ಎಕರೆ ಪ್ರದೇಶದಲ್ಲಿ ಸಣ್ಣ ಕೈಗಾರಿಕಾ ವಲಯಗಳನ್ನು ಪ್ರಾರಂಭಿಸಲಾಗಿದೆ; | ಕಳೆದ 5 ವರ್ಷಗಳ ಅವಧಿಯಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಯಾವುದೇ ಸಣ್ಣ ಕೈಗಾರಿಕಾ ವಲಯ / ವಸಾಹತುಗಳನ್ನು ಪ್ರಾರಂಭಿಸಿರುವುದಿಲ್ಲ. |
| ಆ) | ಕೈಗಾರಿಕೆಗಳನ್ನು ಸ್ಥಾಪಿಸಲು ಕೆಎಸ್ಎಸ್ ಐಡಿಸಿ ಮೂಲಕ ಮಂಜೂರು ಮಾಡಲಾಗಿರುವ ನಿವೇಶನಗಳೆಷ್ಟು; ಇದರಲ್ಲಿ ಎಷ್ಟು ಕೈಗಾರಿಕೆಗಳು ಪ್ರಾರಂಭಗೊಂಡಿದೆ; ಎಷ್ಟು ಜನರಿಗೆ ಉದ್ಯೋಗ ದೊರಕಿದೆ; (ಪೂರ್ಣ ವಿವರ ನೀಡುವುದು) | ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ನಿಗಮದ ಮೂಲಕ ಹಂಚಿಕೆ / ಮಂಜೂರು ಮಾಡಲಾಗಿರುವ ನಿವೇಶನಗಳ ಸಂಖ್ಯೆ, ಪ್ರಾರಂಭಗೊಂಡಿರುವ ಕೈಗಾರಿಕೆಗಳ ಸಂಖ್ಯೆ ಮತ್ತು ಉದ್ಯೋಗ ದೊರೆತಿರುವ ವಿವರಗಳು ಈ ಕೆಳಗಿನಂತಿರುತ್ತದೆ: |

| ಕ್ರ ಸಂ | ಜಿಲ್ಲೆಯ ಹೆಸರು | ಹಂಚಿಕೆ / ಮಂಜೂರು ಮಾಡಲಾದ ನಿವೇಶನಗಳ ಸಂಖ್ಯೆ | ಪ್ರಾರಂಭ ಗೊಂಡಿರುವ ಕೈಗಾರಿಕೆಗಳ ಸಂಖ್ಯೆ | ಉದ್ಯೋಗ ದೊರೆತಿರುವ ಸಂಖ್ಯೆ |
|---|---|---|---|---|
| | **ಕೋಲಾರ ಜಿಲ್ಲೆ** | | | |
| 1 | ಕ್ಯಾಲನೂರು | 3 | 3 | 18 |
| 2 | ತಮಕ-ಕೋಲಾರ | 20 | 12 | 85 |
| 3 | ಮೈಸೂರುಲ್ಯಾಂಪ್ | 59 | 51 | 300 |
| 4 | ಕೆ.ಜಿ.ಎಫ್ | 9 | 9 | 70 |
| 5 | ಮಾಲೂರು | 17 | 14 | 140 |
| 6 | ಮುಳಬಾಗಿಲು | 12 | 6 | 80 |
| | **ಚಿಕ್ಕಬಳ್ಳಾಪುರ ಜಿಲ್ಲೆ** | | | |
| 1 | ಮುದ್ದೇನಹಳ್ಳಿ | 7 | 7 | 65 |
| 2 | ಚಿಂತಾಮಣಿ | 6 | 6 | 75 |
| 3 | ಗೌರಿಬಿದನೂರು | 26 | 26 | 150 |
| 4 | ಶಿಡ್ಲಘಟ್ಟ | 4 | 4 | 25 |
| 5 | ಕುಡುಮಲಕುಂಟೆ-ಗೌರಿಬಿದನೂರು | 119 | 15 | 150 |

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| ಇ) | ಬಹಳಷ್ಟು ಫಲಾನುಭವಿಗಳು ನಿವೇಶನ ಹಂಚಿಕೆಯಾಗಿ 10 ವರ್ಷಗಳು ಕಳೆದರು, ಇದುವರೆಗೂ ಯಾವುದೇ ಕೈಗಾರಿಕೆಗಳನ್ನು ಪ್ರಾರಂಭಿಸಿಲ್ಲದಿರುವುದು, ಸರ್ಕಾರದ ಗಮನಕ್ಕೆ ಬಂದಿದೆಯೆ; | ಹೌದು. |
| ಈ) | ಬಂದಿದ್ದಲ್ಲಿ, ನಿವೇಶನಗಳನ್ನು ಹಂಚಿಕೆ ಮಾಡುವ ಸಂದರ್ಭದಲ್ಲಿ ಸರ್ಕಾರವು ಅನುಸರಿಸುತ್ತಿರುವ ನೀತಿ ನಿಯಮಗಳೇನು; ಹಾಗೂ ಕಾಲಮಿತಿಯ ಒಳಗೆ ಕೈಗಾರಿಕೆಗಳನ್ನು ಪ್ರಾರಂಭಿಸದಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ; ಮತ್ತು ಇದುವರೆಗೂ ಎಷ್ಟು ನಿವೇಶನಗಳನ್ನು ನಿಗಮದ ವ್ಯಾಪ್ತಿಗೆ ವಾಪಸ್ಸು ಪಡೆಯಲಾಗಿದೆ; | ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಹಂಚಿಕೆ ನಿಯಮಾವಳಿಗಳನ್ವಯ ನಿವೇಶನಗಳನ್ನು ಹಂಚಿಕೆ ಮಾಡುವ ಸಂದರ್ಭದಲ್ಲಿ ಮಳಿಗೆ / ನಿವೇಶನಗಳ ಹಂಚಿಕೆ ನಿಯಮಗಳ ಪ್ರಕಾರ ನಿವೇಶನ ಸ್ವಾಧೀನ ಪಡೆದ ದಿನಾಂಕದಿಂದ 02 ವರ್ಷಗಳ ಒಳಗೆ ಕೈಗಾರಿಕಾ ಕಟ್ಟಡದ ನೀಲಿ ನಕ್ಷೆಗಳನ್ನು ಅನುಮೋದನೆ ಪಡೆದು ಕೈಗಾರಿಕಾ ಕಟ್ಟಡ ನಿರ್ಮಿಸಿ, ವಿದ್ಯುತ್ ಸಂಪರ್ಕ ಪಡೆದು ಕೈಗಾರಿಕಾ ಚಟುವಟಿಕೆ ಪ್ರಾರಂಭಿಸುವ ಷರತ್ತು ವಿಧಿಸಿ ಹಂಚಿಕೆ ಮಾಡಲಾಗುತ್ತಿದೆ. **ಹಂಚಿಕೆ ನಿಯಮಾವಳಿಗಳ ಮಾಹಿತಿಯನ್ನು ಅನುಬಂಧ-1ರಲ್ಲಿ ಒದಗಿಸಿದೆ.** |

| | | |
|---|---|---|
| | | ಕಾಲ ಮಿತಿಯೊಳಗೆ ಹಂಚಿಕೆಯಾದ ನಿವೇಶನಗಳಲ್ಲಿ ಕೈಗಾರಿಕೆಯನ್ನು ಪ್ರಾರಂಭಿಸದೇ ಇರುವ ಕೈಗಾರಿಕೋದ್ಯಮಿಗಳನ್ನು ಗುರುತಿಸಿ, ನಿಗಮದಲ್ಲಿ ಪ್ರಸ್ತುತ ದಿನಾಂಕ 01.10.2020ರಂದು ಜಾರಿಗೊಳಿಸಿರುವ ಹಂಚಿಕೆ ಪುನರ್ ಸ್ಥಾಪನೆ (Restoration) ಆದೇಶಗಳನ್ವಯ ದಂಡ ವಿಧಿಸಿ, ದಿನಾಂಕ 31.03.2024ರವರೆಗೆ ಕಾಲಾವಕಾಶ ನೀಡಿ ಕೈಗಾರಿಕೆಗಳನ್ನು ನಡೆಸಲು ಅವಕಾಶ ಕಲ್ಪಿಸಲಾಗಿದೆ.<br><br>ಹಂಚಿಕೆ ಪುನರ್ ಸ್ಥಾಪನೆ ಆದೇಶದನ್ವಯ ದಿನಾಂಕ 31.03.2024 ರವರೆಗೆ ಕಾಲಾವಕಾಶ ಇರುವುದರಿಂದ ಯಾವುದೇ ನಿವೇಶನವನ್ನು ನಿಗಮದ ವ್ಯಾಪ್ತಿಗೆ ವಾಪಸ್ಸು ಪಡೆದಿರುವುದಿಲ್ಲ. |
| ಉ) | ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಹೊಸದಾಗಿ ಕೈಗಾರಿಕಾ ವಲಯವನ್ನು ಸ್ಥಾಪಿಸಲು ಯಾವುದಾದರೂ ಸ್ಥಳವನ್ನು ಗುರುತಿಸಲಾಗಿದೆಯೇ; (ಪೂರ್ಣ ವಿವರ ಒದಗಿಸುವುದು). | ಕೋಲಾರ ಜಿಲ್ಲೆಯ ಕೋಲಾರ, ಮಾಲೂರು, ಬಂಗಾರಪೇಟೆ, ಕೆ.ಜಿ.ಎಫ್, ಮುಳಬಾಗಿಲು, ಶ್ರೀನಿವಾಸಪುರ ತಾಲ್ಲೂಕುಗಳಲ್ಲಿ ಕೈಗಾರಿಕಾ ವಸಾಹತು ಸ್ಥಾಪಿಸಲು ಸುಮಾರು 20 ರಿಂದ 30 ಎಕರೆ ಸರ್ಕಾರಿ ಜಮೀನು ಮಂಜೂರು ಮಾಡುವಂತೆ ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ ರವರನ್ನು ದಿನಾಂಕ: 13.09.2022ರ ಪತ್ರದಲ್ಲಿ ಕೋರಲಾಗಿದೆ.<br><br>ಚಿಕ್ಕಬಳ್ಳಾಪುರ ಜಿಲ್ಲೆಯ ಚಿಕ್ಕಬಳ್ಳಾಪುರ, ಚಿಂತಾಮಣಿ, ಗೌರಿಬಿದನೂರು, ಬಾಗೇಪಲ್ಲಿ ಮತ್ತು ಶಿಡ್ಲಘಟ್ಟ ತಾಲ್ಲೂಕುಗಳಲ್ಲೂ ಕೈಗಾರಿಕಾ ವಸಾಹತು ಸ್ಥಾಪಿಸಲು ಸುಮಾರು 25 ರಿಂದ 30 ಎಕರೆ ಸೂಕ್ತ ಜಮೀನು ಮಂಜೂರು ಮಾಡುವಂತೆ ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ ರವರನ್ನು ದಿನಾಂಕ: 26.07.2022ರ ಪತ್ರದಲ್ಲಿ ಕೋರಲಾಗಿದೆ. |

ಸಿಐ 54 ಸಿಎಸ್‌ಸಿ 2024

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ
ಉದ್ದಿಮೆಗಳ ಸಚಿವರು

ಅನುಬಂಧ - 1

01

KARNATAKA STATE SMALL INDUSTRIES DEVELOPMENT CORPN.LTD
( INDUSTRIAL ESTATE, RAJAJINAGAR, BANGALORE-560 044 )
KSSIDC

| CHIEF MANAGER (CO-ORDN) | INTER OFFICE NOTE | CM (IES) Z-I,II,III. DCM(IES) U/ R/ PNY/ TUM/DVG/HBL/GLB/ BLY/MYS/SMG/MNG. |
|---|---|---|

CRD : ALLT : RULES : 2005      12 May 2005

SUB : Forwardal of Allotment Rules.

********

With reference to the above, please find enclosed a copy of the Allotment Rules (2004) for reference and guidance.

Sd/- 12/5/2005
CHIEF MANAGER (CO-ORDN)

MYDO/ ION/DCMS ION

KARNATAKA STATE SMALL INDUSTRIES DEVELOPMENT CORPORATION LIMITED

ALLOTMENT RULES (2004)

============

## CHAPTER-I

### 1.0 SHORT TITLE, EXTENT AND COMMENCEMENT:-

i) These Rules may be called THE KARNATAKA STATE SMALL INDUSTRIES DEVELOPMENT CORPORATION LIMITED - Allotment Rules (2004).

ii) It shall come into effect from such date as may be notified by KSSIDC Limited.

---------------

## CHAPTER-II

2.0 " DEFINITIONS" : In these Rules, unless the context otherwise requires –

i) "ALLOTEE" : .... means an Individual / Partnership firm, HUF, Associations of persons or any other department of Government, Body Corporate registered/ Incorporated by or under Law to whom a Shed / Plot is allotted on lease or Lease-cum-Sale Basis OR an outright sale.

ii) "ALLOTTMENT COMMITTEE": means the State Level Shed allotment committee or the District Level Shed Allotment Committee or any other committee constituted by the Government of Karnataka under the Facilitation Act or any other Act as applicable from time to time/ Board of KSSIDC Ltd from time to time which has jurisdiction for allotment of sheds and plots in the concerned Industrial Estates.

iii) "APPLICANT" : means an Individual, Partnership Firm, HUF, Association of persons, any department of Government, body corporate registered / incorporated by or under Law who has submitted application in the prescribed form seeking allotment of Shed / Plot on lease or Lease -cum-Sale basis or on outright sale basis in an Industrial Estate.

IV) " APPLICATION": means a prescribed form supplied by KSSIDC containing various particulars to be furnished by an applicant who seeks allotment of a shed / plot.

v) " BOARD " means the Board of Directors of Karnataka State Small Industries Development Corporation Limited.

vi) " DLSAC "means the District Level Shed Allotment Committee/ Single Window Agency or any other Committee constituted under the facilitation Act or any other Act applicable constituted by the Government of Karnataka from time to time.

vii) " FAMILY " : means where the applicant is an individual, his or her spouse and children.

viii) "FLAT " : means an apartment or a part of a Multi Storeyed Industrial Structure which can be used to house an industry therein.

ix) " GOVERNMENT": means the Government of Karnataka.

x) "GODOWN " : means a structure constructed by KSSIDC meant for storage of goods excluding explosives and banned drugs.

xi) " INDUSTRY ": means any economic /commercial activity either in the manufacturing or services sector for the purposes of generating employment and wealth.

xii) "INDUSTRIAL ESTATE " : means a definite area of land on which a conglomerate of Industrial sheds / plots / flats / godowns / shops are constructed / formed by KSSIDC Ltd.

xiii) "KSSIDC" : means Karnataka State Small Industries Development Corporation Limited.

xiv) "M.S. COMPLEX": means a Multi Storeyed Building constructed by KSSIDC for housing Industrial Units or offices or Shops or Godowns.

xv) " PLOT " : means a de-marcated piece of land within the Industrial Estate suitable for housing an Industry there on.

xvi) " RULES " : means the Karnataka State Small Industries Development Corporation Limited Allotment Rules (2004).

xvii) " SHED " : means a structure built by KSSIDC in an Industrial Estate which can be used for purpose of housing an Industry there-in together with the land appurtenant there-to and includes a Flat, a Godown and a Shop.

xviii) "SHOP ": means a structure within an M.S.Complex which can be used for a commercial purpose and / or Business Establishment.

xix)" SLSAC ": means the State Level Shed Allotment Committee constituted by the Government from time to time or under the Facilitation Act or any other Act as applicable from time to time, the jurisdiction of which is given in Schedule-1.

xx) "SSI REGISTRATION CERTIFICATE ":means a certificate either provisional or Permanent issued by the Department of Industries and Commerce, Government of Karnataka.

xxi) "STRAY PLOT" : means a plot once allotted and subsequently cancelled/resumed from the allottee OR a plot surrendered by the allottee OR Land reserved for Civic Amenities OR any plot which is irregular in size and is in variance in Size from other regular plots in an Industrial Estate therefore clearly indicated as stray in the lay out plan.

xxii) " STRAY SHED" :means a shed once allotted and subsequently cancelled /resumed from the allottee OR a shed surrendered by the allottee or a shed in variance in size from the regular sheds constructed by KSSIDC.

xxiii) " TYPE OF SHED /PLOT": means various sizes of sheds and plots constructed and formed by KSSIDC in its Industrial Estates as indicated in Schedule – II.

xxiv) " REALLOTMENT OF SHEDS/PLOTS": means the allotment of a shed / plot cancelled / seized / surrendered due to various reasons and allotment of such shed or plot once again.

Words & phrases not defined here-in-above but adopted here-in shall have the same meaning as available in other relevant legislations, rules and regulations.

## CHAPTER-III

3.0 "ALLOTMENT OF SHEDS/ PLOTS" : The sheds / plots in the various Industrial Estates shall be allotted in accordance with these Rules only.

3.1 "AUTHORITIES OF ALLOTMENT." :

The sheds / plots shall be allotted by the allotment committee.

a) There shall be a State Level Shed Allotment Committee (SLSAC) which will have jurisdiction to allot notified sheds / plots in the Industrial Estates notified in Schedule I to these Rules.

b) There shall be a District Level Shed Allotment Committee for each of the Districts for allotment of notified shedsand notified plots in Industrial Estates in the Districts other than the Industrial Estates mentioned in Schedule I.
Provided that, till a fresh notification is issued by the Government Constituting the Allotment Committee or provision is made in the facilitation Act or any other applicable Act, the Shed Allotment Committees constituted by Government of Karnataka by its Government Order No.CI 28 CSC 80 dated 18th September 1981 along with additions, alterations and modifications made to it from time to time shall be the allotment committees for considering allotment of sheds and plots.

3.2 " NOTIFYING THE AVAILABILITY OF SHEDS / PLOTS" :

The sheds / plots available for allotment in the various Industrial Estates shall be notified as under:

(a) The availability of sheds / plots in all the Industrial Estates shall be notified once in every year in the month of April in two news papers of state wide circulation out of which one shall be in Kannada and on the Website of KSSIDC.

(b) Copies of such notification shall be sent to state level Industries Associations and prominent regional level Industries Associations.

(c) In addition, at the District level, the availability of sheds and plots for allotment shall be notified every two months by way of sending such notification to all the local SSI Associations, District Industries Centre, all the concerned branches of KSSIDC and the office of the Deputy Commissioner of the District concerned, against acknowledgement, for display in the respective Notice Boards. Besides, a copy of the notification shall also be sent to the local office of the Department of Information & Publicity of the Government of Karnataka for notification in two leading daily news papers of the District. The Website of KSSIDC shall also contain these notifications.

Notifications shall be published as at (a) (b) & (c) above in such a manner that, atleast 15 days are available to intending applicants to respond. The notification shall

also indicate correct sital measurements and final cost of shed / plot, the last date by which the applications for allotment will have to be submitted together with all the particulars as indicated in the Application form along with Earnest Money Deposit as prescribed in the notification.

3.3 " **PROCEDURE FOR ALLOTMENT OF SHEDS/PLOTS NOTIFIED** ":

3.3.1. Where the number of applications for each type of shed / plot is less than or equal to the number of such type sheds / plots available for allotment, then the Allotment Committee shall consider allotment of sheds / plots to all the applicants whose applications are found to be in order. In such cases, the convener of the SLSAC namely the Managing Director, KSSIDC, shall make the allotments after scrutiny as per checklist and put up for formal ratification of SLSAC. In Districts, the jurisdictional Deputy Chief Manager (IEs) of KSSIDC shall make the allotment after scrutiny as per checklist with the concurrence of the Joint Director, DIC, who is the convener of the DLSAC / SWA and put up to DLSAC / SWA for formal ratification. Allotment intimation to the eligible allottees must be sent within 15 days from the last date of receipt of applications as per notification vide para 3.2.

3.3.2. Where the number of the applications for each type of sheds / plots is more than the number of each type of sheds / plots available for allotment under the notification, the applications so received shall be placed before the

allotment committee after scrutiny as per checklist for consideration. 15% of the sheds / plots shall be allotted to SC applicants, 3% for ST applicants and 2% for nomadic tribes, provided further that the allotment shall be in such a manner that overall 30% representation is given to women entrepreneurs. Further, where the applications in any of the categories. mentioned above are not available, the available sheds / plots shall be allotted by the allotment committee to other applicants who have applied.

### 3.4. "PROCEDURE FOR ALLOTMENT OF STRAY SHED / PLOT":

3.4.1. Notifications shall be published as at (a) (b) & (c) above in such a manner that, atleast 15 days are available to intending applicants to respond.

3.4.2. The applicants shall be asked by way of letter to submit their offer in sealed covers for allotment of the shed or plot keeping the cost indicated in the Notification as the base value. In the said letter, the applicants will be made clear of the consequences of the highest bidder withdrawing from the bid.

3.4.3. These written quotations will be accompanied by a deposit equivalent to 5% of the base value of the shed / plot or Rs.50,000/- whichever is less.

3.4.4. These sealed covers be opened by a Committee of Officers of KSSIDC in the presence of the Applicants under proper intimation to the Applicants.

3.4.5. A comparative statement of the quotations received shall be prepared by KSSIDC and submitted to the Allotment Committee who there upon shall after verifying that the above procedures has been properly followed, confirm the allotment to the highest bidder. In case more than one bidder quote the same amount, then the procedure of draw of lots will be resorted to in the presence of the bidders.

3.4.6. After the confirmation by the Committee, KSSIDC shall proceed to allot the shed by adjusting the deposit towards part of the deposits to be paid at the time of taking possession of the shed / plot. The entire process and the allotment letter to the eligible allottees should be sent within 30 days from the last date of receipt of applications as per notification under para 3.2.

3.4.7. In the event of the highest bidder refusing to take the allotment, the amount deposited by him shall stand forfeited automatically and the allotment to the next highest bidder and so on shall be made by the committee. Waiting list shall be prepared. If the highest bidder fails to take the allotment within the stipulated period, the allotment can be offered to the next highest bidder.

3.4.8. The deposits of the unsuccessful applicants who participated in the bid shall be returned by KSSIDC.

3.4.9. The allotment so made shall be published in the Notice Boards as also the Website of KSSIDC and allotment letter to the successful bidder be issued by KSSIDC.

3.5. Land reserved for Departmental purposes and Common Facility purposes shall not be allotted. Decision with regard to necessity for any de-reservation vests with the Board and the matter to be referred to government for ratification.

3.6. Not withstanding provisions contained herein above, the Corporation shall have the powers to auction any shed/plot as per the procedure in para 3.4 with the approval of the Board.

***************

SCHEDULE-1

LIST OF INDUSTRIAL ESTATES COMING UNDER THE JURISDICTION OF SLSAC.

| SL.NO. | DISTRICT | NAME OF INDL.ESTATE |
|---|---|---|
| 1 | BANGALORE URBAN | RAJAJINAGAR |
| | | DYVASANDRA |
| | | NGEF |
| | | ELECTRONIC CITY |
| | | VEERASANDRA 1ST STAGE |
| | | CHIKKANAGAMANGALA (VEERSANDRA 2ND STAGE) |
| | | BOMMASANDRA 1 & II STAGE |
| | | PEENYA 1ST STAGE |
| | | PEENYA 2ND STAGE |
| | | PEENYA 3RD STAGE |
| | | KUMBALGODU |
| 2 | BANGALORE RURAL | HOSKOTE |
| | | DODDABALLAPURA |
| | | MAGADI |
| | | RAMANAGAR |
| | | YELAHANKA |
| | | JIGANI 1 & II STAGE |
| | | KANAKAPURA |
| | | |

## SCHEDULE -II

## TYPE OF SHEDS AND PLOTS WITH DIMENSION

I. SHEDS

| SL.NO. | TYPE OF SHED | BUILT UP AREA (IN SQ.MTRS) (APPROSIMATELY) |
|---|---|---|
| 1 | A | 500.54 |
| 2 | B | 263.59 |
| 3 | C | 170.75 |
| 4 | D | 94.75 |
| 5 | SM | 62.85 |
| 6 | M | 28.56 |
| 7 | WS(JIGANI) | 21.00 |

II. PLOTS.

| SL.NO: | TYPE OF PLOT | AREA IN (IN SQ.MTRS) (APPROSIMATELY) |
|---|---|---|
| 1 | L | 785 |
| 2 | M | 1045 |
| 3 | N | 2048 |
| 4 | P | 903 |
| 5 | Q | 546 |
| 6 | R | 378 |
| 7 | S | 243 |
| 8 | SPL PLOTS | PLOTS OF IRREGULAR SIZES & SHAPES WITH DIFFERENT DIMENSIONS |
| 9 | CP | 326 JIGANI |
| 10 | DP | 272 |
| 11 | EP | 223 |
| 12 | SP | 320 TO 900 |

III. *In respect of M.S. Complex as the dimensions depend upon the sital area and the structure to be constructed, the types as may be notified in the notification calling for applications shall be deemed to be type of sheds / plots.*

KARNATAKA STATE SMALL INDUSTRIES DEVELOPMENT CORPN.LTD
(INDUSTRIAL ESTATE, RAJAJINAGAR, BANGALORE-560 044)
WEB : WWW. KSSIDC.NET KSSIDC E-MAIL: Kssidcho@vsnl.com

| C.M(CO.ORD) | INTER OFFICE NOTE | CM (IEs) Z-I,II,III B'lore/Hubli/Mysore ALL DCM(IEs) |
|---|---|---|

ED:PAS:IES:PLOTS:SALEDEED:2004 DATE 05-05-2005

Sub: Issue of Supplementary Application form alongwith shed/plot application..

With reference to the above please find enclosed format of the supplementary application form as well as affidavit to be filled-in by the applicant and submitted along with the regular shed/plot application.

The supplementary application form/affidavit shall be issued along with the regular shed/plot application forms only in case of notifications issued for regular allotment cases and NOT applicable in respect of applications for allotment under bid system.

CHIEF MANAGER(CO.ORD)

KSSIDC

KARNATAKA STATE SMALL INDUSTRIES DEVELOPMENT CORPN. LTD.
( INDUSTRIAL ESTATE, RAJAJINAGAR, BANGALORE-560 044 )

## SUPPLEMENTARY APPLICATION FORM TO BE FILLED IN PERSON IN BLOCK LETTERS BY THE APPLICANT:

I. Details on the Entrepreneur / Firm applying for the shed / plot

IS THE APPLICANT : Please tick the Appropriate column

| | | |
|---|---|---|
| a) a first generation entrepreneur | YES | NO |
| b) woman entrepreneur | YES | NO |
| c) belongs to SC/ST category (enclose an attested copy of the certificate issued by the competent authority) | YES | NO |
| d) differently abled category (enclose an attested copy of the certificate issued by the competent authority) | YES | NO |
| e) an Ex-serviceman (enclose an attested copy of the certificate issued by the competent authority) | YES | NO |
| f) a Foreign repatriate bringing in Expertise. | YES | NO |
| If YES, provide details | | |
| g) Is the applicant an NRI | | |
| h) a local entrepreneur. (Whether residing in Karnataka for the past 5 years or more) ( enclose Domicile Certificate ) | YES | NO |
| i) technically qualified intending to start the unit in the field of his expertise. (enclose the relevant Degree Certificates, attested copies) | YES | NO |
| j) does the applicant have any previous work experience connected to the present project. (If so, enclose experience certificate) | YES | NO |
| k) Has the applicant availed any benefit under PMRY Scheme. If so details. | YES | NO |
| l) Has the applicant been allotted a shed / plot in any of the Industrial Estates of KSSIDC. | YES | NO |
| If YES, details. | | |

17



| | |
|---|---|
| 3. Product classification | Food ☐ Chemical ☐ Garments ☐<br>Electrical ☐ Textile ☐ Electronics ☐<br>Engineering ☐ Packaging ☐ Printing ☐<br>Plastic ☐ Medical Eqip ☐ Pharma ☐<br>Specify Others |
| 4. Infrastructure required for the project | iv) Covered area<br>iv) Open area<br>iv) Power requirement- H.P<br>iv) Monthly water requirement (Ltrs) |
| 5. Employment generation: (No. of employees in the unit) | Skilled :<br>Unskilled :<br>Managerial :<br>Male :<br>Female : |

6. OTHER DETAILS:

| | | |
|---|---|---|
| a) In the case of the applicant applying for sheds, is the entrepreneur willing for payment of 99 % of shed cost upfront within 45 days of allotment. | YES | NO |
| b) Is the project report enclosed | YES | NO |
| c) Is the SSI Registration Certificate enclosed | YES | NO |
| d) Is the product an import substitution. | YES | NO |
| e) Is the product export oriented. | YES | NO |
| f) Is the project labour intensive. | YES | NO |
| g) Does the project generate effluents and air pollutants. Is there hazardous waste?. | YES | NO |
| h) If yes, has the unit has made any provision in the project for waste treatment before disposal. | YES | NO |
| i) Whether the project is water intensive ?. Water consumption details per day. | YES | NO |
| j) Whether the project is Power intensive. | YES | NO |
| k) Is it an ancillary to any public sector/ pvt. sector large/ medium unit. | YES | NO |

| | |
|---|---|
| 7. Financial details | i) Details of Cash flow (Separate Statement to be enclosed)<br>ii) Details of average Debt Service Coverage Ratio (Separate Statement to be enclosed)<br>iii) Is the financial viability study of the project made by any financial institution. YES / NO<br>If yes, enclose report |

8. IF THE APPLICANT HAS AN EXISTING UNIT, THE FOLLOWING DETAILS TO BE PROVIDED.

| | | |
|---|---|---|
| I) Does the applicant have an existing unit presently running successfully in private premises with a need to shift from the existing location. | YES | NO |
| ii) Detailed addresses of the present location and ownership details. (Copy of Rental agreement to be enclosed if applicable.) | | |
| (iii) Details of workforce employed. | i) Skilled<br>ii) Unskilled<br>iii) Managerial<br>iv) Male<br>v) Female | |
| (iv) Whether the unit has any certification | ISO 9001 ☐ ISO 14000 ☐ BIS ☐<br>Others specify: | |
| (v) Whether there is tie up with any foreign promoters. | YES | NO |
| If so, furnish details. | | |
| (vi) Whether there is tie up with any local/ MNCs/ large Industries. | YES | NO |
| If so, furnish details. | | |
| (vii) Furnish details of VAT / MODVAT / Sales Tax Registration. (Copies to be enclosed) | | |
| (viii) Furnish copy of the SSI Registration Certificate (PMT) | | |
| (ix) Details of annual turnover with audited statement and PAN NO./TAN NO. for the last two years be enclosed. | | |
| X) Whether it is registered as an export unit or is a deemed exporter. Details to be furnished along with the certificates. | | |

SIGNATURE OF THE APPLICANT.

KARNATAKA STATE SMALL INDUSTRIES DEVELOPMENT CORPON LTD
Industrial Estate, Rajajinagar, Bangalore 560 044.
KSSIDC

CRD/EXIT POLICY/PLOTS/2005 DATE 22-12-05.

## OFFICE ORDER

SUB: Surrender /Exit Policy for allotted plots.
REF: 295th Board Meeting held on 17.8.2005
2. Office Order NO.CRD/ SALE-DEEDS/ 2005, DATED 15.10.2005

****************

The Board in its 295th Meeting held on17.08.2005 has approved the proposal for exit policy for allotted plots and the policy is as under.

1. In case of surrender of plot during the first two years of allotment, 75% of the cost of the plot shall be refunded however by levying 5% on the cost of the plot towards slum cess and other statutory payments.
2. In case of surrender of plots after two years in industrial estate other than in Zone-I, upto 5 years 50% of the plot cost paid shall be refunded however by levying 5% on the cost of the plot towards slum cess and other statutory payments.
3. No plots surrender is possible after two years of allotment in Zone-I.
4. In case of cancellation of the allotment of plot by the Corporation for what so ever reason/forfeiture, the entire amounts paid shall be forfeited.

Contd..2...

The proportionate amounts as per the period of allotment only out of the amount paid by the allottec, would be eligible for refund.

vi) It is the responsibility of the jurisdictional DCM(IEs) to monitor the usage of the allotted plots. In case there is no usage/no construction of the factory building even after a lapse of 2 years form the date of allotment in Bangalore (Rural) & (Urban) Districts and 5 years in other districts, the DCM(IEs) shall issue written notice within 15 days from the date of lapse of the said period, and also give an opportunity for personal hearing to the allottees regarding reasons any for non-usage. The same will have to be put up to the Managing Director within 07 days from the date of the hearing.

vii) The allotment of plot can be cancelled if any of the terms and conditions of lease is violated. As per the existing policy of KSSIDC no refunds shall be made in cases where the cancellation of allotment of plots is made.

viii) With regard to issue of Sale-Deeds for plots, the guidelines issued vide Office Order dated 15.10.2005 under reference -2 shall be followed.

MANAGING DIRECTOR

TO . CM (IES) Z-I,II,III. / All DCMs (IES)
Copy : CM (F)I/c/ CM (IA)I/c DCM (LAW)/ PS TO MD. for infn.

MYDO/CIR-01/SALE-DEED

A-z 11 (IES, MIA)

ಕರಾಸಕೈಅನಿನಿ
ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ: 080-23407011-25 ಇ-ಮೈಲ್:kssidcho@gmail.com ವೆಬ್‌ಸೈಟ್:www.kssidc.co.in

ಸಂಖ್ಯೆ:ಕೈವ:ನಿರ್ವಹಣಾ:ನೀತಿ:ಮಾರ್ಗಸೂಚಿ:2020/23 ದಿನಾಂಕ: 01-10-2020

## ಕಛೇರಿ ಆದೇಶ

ವಿಷಯ: ಕೈಗಾರಿಕಾ ವಸಾಹತು ನಿರ್ವಹಣಾ ನೀತಿಗೆ ಮಾರ್ಗಸೂಚಿಗಳ ಪರಿಷ್ಕರಣೆ ಕುರಿತು.

ಉಲ್ಲೇಖ:
1. ದಿನಾಂಕ: 20-01-2020 ರಂದು ಜರುಗಿದ ಬಿಡಿ ಮಳಿಗೆ ಹಂಚಿಕೆ ಸಮಿತಿ ಸಭೆಯ ನಡವಳಿ
2. ದಿನಾಂಕ 28-01-2020 ರಂದು ಜರುಗಿದ ನಿಗಮದ 357ನೇ ಆಡಳಿತ ಮಂಡಳಿ ಸಭೆಯ ನಡವಳಿಗಳು.
3. ನಿಗಮದ ಕಛೇರಿ ಆದೇಶ ಸಂಖ್ಯೆ: ಸಮನ್ವಯ: ಕೈವ: ನಿರ್ವಹಣಾ: ನೀತಿ: ಮಾ. ಸೂ: 2015:972 ದಿನಾಂಕ: 22-06-2015.
4. ಕಛೇರಿ ಆದೇಶ ಸಂಖ್ಯೆ:ಕೈವ:ನಿರ್ವಹಣಾನೀತಿ:ಮಾರ್ಗಸೂಚಿ:2020/108 ದಿನಾಂಕ 12-02-2020.
5. ಕಛೇರಿ ಆದೇಶ ಸಂಖ್ಯೆ:ಕೈವ:ನಿರ್ವಹಣಾನೀತಿ:ಮಾರ್ಗಸೂಚಿ:2020/108 ದಿನಾಂಕ 08-05-2020.
6. ದಿನಾಂಕ 15-09-2020 ರಂದು ಜರುಗಿದ ನಿಗಮದ 360ನೇ ಆಡಳಿತ ಮಂಡಳಿ ಸಭೆಯ ನಡವಳಿಗಳು.

****

ನಮ್ಮ ರಾಜ್ಯ/ದೇಶ ಮತ್ತು ಪ್ರಪಂಚದಾದ್ಯಂತ ಕೋವಿಡ್-19 ಮಹಾಮಾರಿಯು ಹರಡುತ್ತಿದ್ದು, ಇದನ್ನು ನಿಯಂತ್ರಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಲವಾರು ಕ್ರಮಗಳನ್ನು/ನಿಯಮಗಳನ್ನು ದೇಶದಾದ್ಯಂತ ಅನ್ವಯಿಸುವಂತೆ ಜಾರಿಗೆ ತಂದಿರುತ್ತದೆ. ಅದರಲ್ಲಿ ದಿನಾಂಕ: 23.03.2020 ರಿಂದ ಜಾರಿಗೆ ಬರುವಂತೆ ದಿನಾಂಕ: 17.05.2020 ರವರೆಗೆ ದೇಶಾದಾದ್ಯಂತ ಲಾಕ್‌ಡೌನ್ ಘೋಷಿಸಿರುತ್ತದೆ. ಇದರಿಂದ ಆರ್ಥಿಕ ಹಿಂಜರಿತ ಉಂಟಾದುದರಿಂದ, ಸಣ್ಣ, ಅತೀ ಸಣ್ಣ ಕೈಗಾರಿಕೋದ್ಯಮಿಗಳು ತಮ್ಮ ಕೈಗಾರಿಕಾ ಚಟುವಟಿಕೆಗಳನ್ನು ನಡೆಸಲು ಕಷ್ಟ ಸಾಧ್ಯವಾಗಿದ್ದು ಹಾಗೂ ಕೈಗಾರಿಕೋದ್ಯಮಿಗಳು ಹೊಸ ಕೈಗಾರಿಕೆಗಳ ಯೋಜನೆಗಳನ್ನು ಪ್ರಾರಂಭಿಸಲು ಸಾಧ್ಯವಾಗದೇ ಸಂಕಷ್ಟಕ್ಕೆ ಈಡಾಗಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಸಣ್ಣ, ಅತೀ ಸಣ್ಣ ಕೈಗಾರಿಕೋದ್ಯಮಿಗಳು ತಮ್ಮ ಯೋಜನೆಗಳನ್ನು ಅನುಷ್ಠಾನಗೊಳಿಸಲು ಅನುವಾಗುವಂತೆ ಈ ಹಿಂದೆ ಹೊರಡಿಸಲಾಗಿದ್ದ ದಿನಾಂಕ 08-05-2020ರ ಪರಿಷ್ಕರಣೆ ಆದೇಶದಲ್ಲಿ ವಿವರಿಸಿರುವ ಮಾರ್ಗಸೂಚಿಗಳನ್ನು ನಿಗಮದ 360ನೇ ಆಡಳಿತ ಮಂಡಳಿಯು ಮಾರ್ಪಾಡುಗೊಳಿಸಿದ್ದು, ಅದರಂತೆ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

ಹಂಚಿಕೆದಾರರು ತಮಗೆ ಹಂಚಿಕೆಯಾದ ನಿವೇಶನಗಳಲ್ಲಿ ನಿಗಧಿತ ಸಮಯದಲ್ಲಿ ಕೈಗಾರಿಕಾ ಕಟ್ಟಡಗಳನ್ನು ನಿರ್ಮಿಸದೇ ಇರುವಂತಹ ಹಂಚಿಕೆದಾರರುಗಳಿಗೆ ಕೆಳಕಂಡ ತಖ್ತೆಯಲ್ಲಿ ಸೂಚಿಸಿರುವ ದಂಡದ ಮೊತ್ತವನ್ನು ಪಾವತಿಸಿಕೊಂಡು ಮರು ಸ್ವಾಧೀನ ನೀಡುವುದು.

| ಕ್ರ.ಸಂ | ಕೈಗಾರಿಕಾ ವಸಾಹತುಗಳ ವರ್ಗೀಕರಣ (ಪ್ರವರ್ಗ) | ಮರು ಸ್ಥಾಪನೆ ಮಾಡುವ ಸಂದರ್ಭದಲ್ಲಿ ಹಂಚಿಕೆದಾರರು ಪಾವತಿಸಬೇಕಾದ ನಿವೇಶನ / ಮಳಿಗೆಯ ಚಾಲ್ತಿ ದರದ ದಂಡದ ಪ್ರಮಾಣ |
|---|---|---|
| 1 | "ಎ" | ಶೇ.15 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ |
| 2 | "ಬಿ" | ಶೇ. 10 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ |
| 3 | "ಸಿ" | ಶೇ. 8 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ |
| 4 | "ಡಿ" | ಶೇ. 5 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ |

ಈ ಕಛೇರಿ ಆದೇಶ ಹೊರಡಿಸುವ ದಿನಾಂಕದಿಂದ ಒಂದು ವರ್ಷದಲ್ಲಿ ಕಟ್ಟಡ ನಿರ್ಮಿಸಿ ಕೈಗಾರಿಕೆಯನ್ನು ಪ್ರಾರಂಭಿಸುವ ಹಂಚಿಕೆದಾರರುಗಳಿಗೆ ದಿನಾಂಕ: 08-05-2020 ರಂದು ಹೊರಡಿಸಲಾಗಿದ್ದ ಕಛೇರಿ ಆದೇಶದಲ್ಲಿ ತಿಳಿಸಿದಂತೆ ಕ್ರಯಪತ್ರ ನಿರ್ವಹಿಸುವ ಸಂದರ್ಭದಲ್ಲಿ ನಿಗದಿಪಡಿಸಿದ್ದ ಶೇ.10 ರಷ್ಟು ಚಾಲ್ತಿ ದರದ ದಂಡದ ಪ್ರಮಾಣವನ್ನು ಕೋವಿಡ್-19 ಇರುವ ಹಿನ್ನೆಲೆಯಲ್ಲಿ ರಿಯಾಯಿತಿ ನೀಡುವಂತೆ ಸೂಚಿಸಲಾಗಿದೆ. ಈ ಸೌಲಭ್ಯ ಈ ಕಛೇರಿ ಆದೇಶದ ದಿನಾಂಕದಿಂದ ಒಂದು ವರ್ಷದಲ್ಲಿ ಕಟ್ಟಡ ನಿರ್ಮಿಸಿ ಕೈಗಾರಿಕೆ ಪ್ರಾರಂಭಿಸುವವರಿಗೆ ಮಾತ್ರ ಲಭ್ಯವಿರುತ್ತದೆ.

ಹಂಚಿಕೆಯಾದ ನಿವೇಶನಗಳಲ್ಲಿ ನಿಗಧಿತ ಅವಧಿಯಲ್ಲಿ ಕಟ್ಟಡವನ್ನು ನಿರ್ಮಿಸಲು ಪ್ರಾರಂಭಿಸದೇ, ಕರಾರು ಅವಧಿ ಮುಗಿದ ನಂತರ ಕಟ್ಟಡ ನಿರ್ಮಿಸಲು ಪ್ರಾರಂಭಿಸಿರುವಂತಹ ಮತ್ತು ಅರೆ ನಿರ್ಮಾಣದ ಹಂತದಲ್ಲಿರುವ ಘಟಕಗಳಿಗೆ ಹಾಗೂ ಕಟ್ಟಡ ನಿರ್ಮಿಸಿ ವಿದ್ಯುಚ್ಛಕ್ತಿ ಪಡೆಯದೆ ಇರುವಂತಹ ಹಾಗೂ ವಿದ್ಯುಚ್ಛಕ್ತಿ ಪಡೆದು ಕಾರ್ಯ ನಿರ್ವಹಿಸದೇ ಹಾಗೂ ಕಾರ್ಯ ನಿರ್ವಹಿಸುತ್ತಿರುವ ದಿನಾಂಕ: 08.05.2020ರ ಕಛೇರಿ ಆದೇಶಕ್ಕೆ ಮುನ್ನ ಇರುವಂತಹ ಘಟಕಗಳಿಗೆ ಈ ಕೆಳಕಂಡ ತಖ್ತೆಯಲ್ಲಿ ಸೂಚಿಸಿರುವಂತೆ ದಂಡವನ್ನು ಪಾವತಿಸಿಕೊಂಡು ಮರುಸ್ವಾಧೀನ ನೀಡಲು ಸೂಚಿಸಲಾಗಿದೆ.

| ಕ್ರ.ಸಂ | ಕೈಗಾರಿಕಾ ವಸಾಹತುಗಳ ವರ್ಗೀಕರಣ (ಪ್ರವರ್ಗ) | ಪುನರ್ ಸ್ಥಾಪನೆ ಮಾಡುವ ಸಂದರ್ಭದಲ್ಲಿ ಹಂಚಿಕೆದಾರರು ಪಾವತಿಸಬೇಕಾದ ವಿವರ / ಚಾಲ್ತಿ ದರದ ದಂಡದ ಪ್ರಮಾಣ |
|---|---|---|
| 1 | "ಎ" | ಶೇ.10 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ |
| 2 | "ಬಿ" | ಶೇ. 8 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ |
| 3 | "ಸಿ" | ಶೇ. 5 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ |
| 4 | "ಡಿ" | ಶೇ. 3 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ |

ಈ ಕಛೇರಿ ಆದೇಶ ಹೊರಡಿಸುವ ದಿನಾಂಕದಿಂದ ಒಂದು ವರ್ಷದಲ್ಲಿ ಕಟ್ಟಡ ನಿರ್ಮಿಸಿ ಕೈಗಾರಿಕೆಯನ್ನು ಪ್ರಾರಂಭಿಸುವ ಹಂಚಿಕೆದಾರರುಗಳಿಗೆ ದಿನಾಂಕ: 08-05-2020 ರಂದು ಹೊರಡಿಸಲಾಗಿದ್ದ ಕಛೇರಿ ಆದೇಶದಲ್ಲಿ ತಿಳಿಸಿದಂತೆ ಕ್ರಯಪತ್ರ ನಿರ್ವಹಿಸುವ ಸಂದರ್ಭದಲ್ಲಿ ನಿಗದಿಪಡಿಸಿದ್ದ ಶೇ.10 ರಷ್ಟು ಚಾಲ್ತಿ ದರದ ದಂಡದ ಪ್ರಮಾಣವನ್ನು ಕೋವಿಡ್-19 ಇರುವ ಹಿನ್ನೆಲೆಯಲ್ಲಿ ರಿಯಾಯಿತಿ ನೀಡುವಂತೆ ಸೂಚಿಸಲಾಗಿದೆ. ಈ ಸೌಲಭ್ಯ ಈ ಕಛೇರಿ ಆದೇಶದ ದಿನಾಂಕದಿಂದ ಒಂದು ವರ್ಷದಲ್ಲಿ ಕಟ್ಟಡ ನಿರ್ಮಿಸಿ ಕೈಗಾರಿಕೆ ಪ್ರಾರಂಭಿಸುವವರಿಗೆ ಮಾತ್ರ ಲಭ್ಯವಿರುತ್ತದೆ.

ಮುಂದುವರೆದಂತೆ, ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸಲು ಸೂಚಿಸಿದೆ.

1. <u>ಹಂಚಿಕೆ ರದ್ದತಿ ಆದೇಶ ಹೊರಡಿಸಿರುವ ಘಟಕಗಳಿಗೆ ರದ್ದತಿ ಆದೇಶ ನಿರಸನಗೊಳಸುವ ಘಟಕಗಳು:-</u>

ಹಂಚಿಕೆ ಪತ್ರ ಹಾಗೂ ಕರಾರು ಪತ್ರದ ನಿಯಮ ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದ ಮೇರೆಗೆ ಹಂಚಿಕೆ ರದ್ದತಿ ಆದೇಶವನ್ನು ಹೊರಡಿಸಿದ್ದಲ್ಲಿ, ರದ್ದತಿ ಆದೇಶವನ್ನು ನಿರಸನಗೊಳಸಲು ಈ ಆದೇಶದಲ್ಲಿ ತಿಳಿಸಿರುವಂತೆ ಕೈಗಾರಿಕಾ ವಸಾಹತುವಿನ ವರ್ಗೀಕರಣದ ಆಧಾರದ ಮೇಲೆ ದಂಡ ಮತ್ತು ನಿಗಮಕ್ಕೆ ಪಾವತಿಸಬೇಕಿರುವ ಶಾಸನಬದ್ಧ ಶುಲ್ಕಗಳನ್ನು ಪ್ರಚಲಿತ ಅನ್ವಯವಾಗುವ ತೆರಿಗೆಯೊಂದಿಗೆ (ಸೇವಾ ಶುಲ್ಕ, ನೀರಿನ ಶುಲ್ಕ ಇತರೆ) ಪಾವತಿಸಿಕೊಂಡು ಹಂಚಿಕೆ ಪುನರ್ ಸ್ಥಾಪನೆಗೊಳಸಲು (Restoration of allotment) ವ್ಯವಸ್ಥಾಪಕ ನಿರ್ದೇಶಕರ ಅನುಮತಿ ಪಡೆಯತಕ್ಕದ್ದು.

2. <u>ಹಂಚಿಕೆ ರದ್ದತಿ ಆದೇಶ ನಿರಸನಗೊಳಸದೆ ಕಾರ್ಯಾಚರಣೆ ನಡೆಸುತ್ತಿರುವ ಘಟಕಗಳು:-</u>

ಹಂಚಿಕೆ ಪತ್ರ ಹಾಗೂ ಕರಾರು ಪತ್ರದ ನಿಯಮ ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದ ಮೇರೆಗೆ ಹಂಚಿಕೆ ರದ್ದತಿ ಆದೇಶ ಹೊರಡಿಸಿದ ನಂತರ ರದ್ದತಿ ಆದೇಶವನ್ನು ನಿರಸನಗೊಳಸದೆ ಕಟ್ಟಡ ಕಟ್ಟಲು/ವಿದ್ಯುತ್ ಸಂಪರ್ಕ ಪಡೆಯಲು/ಸಂವಿಧಾನ ಬದಲಾವಣೆ/ ಉತ್ಪಾದನಾ ಬದಲಾವಣೆ ಇನ್ನಿತರೆ ಉದ್ದೇಶಗಳಿಗೆ ಅನುಮತಿ ನೀಡಿದ್ದರೂ ಸಹ ಗುತ್ತಿಗೆ ಕರಾರು ಅವಧಿ ಪೂರ್ಣಗೊಂಡಿರುವ ಘಟಕಗಳಲ್ಲಿ ಕೈಗಾರಿಕೆ ಕಾರ್ಯಾಚರಣೆ ನಡೆಯುತ್ತಿದ್ದಲ್ಲಿ, ಅಂತಹ ಹಂಚಿಕೆದಾರರಿಂದ ಒಂದೆ ಬಾರಿಗೆ ಕೋಷ್ಟಕದಲ್ಲಿ ತಿಳಿಸಿರುವ ದಂಡದ ಜೊತೆ ಸೇವಾ ಶುಲ್ಕ ಮತ್ತು ಇತರೆ ಶಾಸನ ಬದ್ಧ ಶುಲ್ಕಗಳನ್ನು ಪ್ರಚಲಿತ

ಅನ್ವಯವಾಗುವ ತೆರಿಗೆಗಳೊಂದಿಗೆ ಒಟ್ಟಾರೆಯಾಗಿ ಪಾವತಿಸಿಕೊಂಡು ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆ ಪಡೆದು ಹಂಚಿಕೆ ರದ್ದತಿ ಆದೇಶವನ್ನು ನಿರಸನಗೊಳಿಸಿ ಹಂಚಿಕೆ ಪುನರ್ ಸ್ಥಾಪನೆ (Restoration of allotment) ಆದೇಶ ಹೊರಡಿಸಿ ಕರಾರು ಅವಧಿ ಪೂರೈಸಿದ ನಂತರ ಹಂಚಿಕೆದಾರರಿಗೆ ಕ್ರಯಪತ್ರ ನಿರ್ವಹಿಸಿ ಕೊಡುವುದು.

3 <u>ನಿಗಮದ ಸ್ವಾಧೀನದಲ್ಲಿರುವ ನಿವೇಶನ/ಮಳಿಗೆಗಳು :-</u>

ಹಂಚಿಕೆ ಪತ್ರ ಹಾಗೂ ಕರಾರು ಪತ್ರದ ನಿಯಮ ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದ ಮೇರೆಗೆ ಹಂಚಿಕೆ ರದ್ದತಿ ಆದೇಶವನ್ನು ಹೊರಡಿಸಿದ ನಂತರ ಕೆ.ಪಿ.ಪಿ ಕಾಯ್ದೆಯನ್ವಯ ಕ್ರಮಕೈಗೊಂಡು ನಿಯಮಾನುಸಾರ ಮಹಜರ್ ಮಾಡಿ ಬೀಗಮುದ್ರೆಗೊಳಿಸಿ (Seizure) ನಿಗಮದ ವಶಕ್ಕೆ (custody) ಪಡೆದಿದ್ದಲ್ಲಿ, ಮಾಜೀ ಹಂಚಿಕೆದರರು ಹಂಚಿಕೆ ಪುನರ್ ಸ್ಥಾಪನೆಗೆ ಮನವಿ ಸಲ್ಲಿಸಿದಲ್ಲಿ ಅಂತಹ ನಿವೇಶನ/ಮಳಿಗೆಗಳು ನಿಗಮದ ಸ್ವಾಧೀನದಲ್ಲಿದ್ದಲ್ಲಿ ಹಂಚಿಕೆ ಪುನರ್ ಸ್ಥಾಪನೆಗೊಳಿಸಲು ಈ ಆದೇಶದಲ್ಲಿ ತಿಳಿಸಿರುವಂತೆ ಕೈಗಾರಿಕಾ ವಸಾಹತುವಿನ ವರ್ಗೀಕರಣದ ಆಧಾರದ ಮೇಲೆ ದಂಡ ಮತ್ತು ನಿಗಮಕ್ಕೆ ಪಾವತಿಸಬೇಕಿರುವ ಶಾಸನಬದ್ಧ ಶುಲ್ಕಗಳನ್ನು ಪ್ರಚಲಿತ ಅನ್ವಯವಾಗುವ ತೆರಿಗೆಯೊಂದಿಗೆ (ಸೇವಾ ಶುಲ್ಕ, ನೀರಿನ ಶುಲ್ಕ, ಇತರೆ) ಪಾವತಿಸಿಕೊಂಡು ವ್ಯವಸ್ಥಾಪಕ ನಿರ್ದೇಶಕರ ಅನುಮತಿ ಪಡೆದು ಮಳಿಗೆ/ನಿವೇಶನಗಳ ಮರು ಸ್ವಾಧೀನವನ್ನು ನೀಡತಕ್ಕದ್ದು.

4. <u>ನ್ಯಾಯಾಲಯದಲ್ಲಿರುವ ಪ್ರಕರಣಗಳ ಘಟಕಗಳು :-</u>

ಹಂಚಿಕೆ ಪತ್ರ ಹಾಗೂ ಕರಾರು ಪತ್ರದ ನಿಯಮ ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದ ಮೇರೆಗೆ ಹಂಚಿಕೆ ರದ್ದತಿ ಆದೇಶವನ್ನು ಹೊರಡಿಸಿದ ನಂತರ ಹಂಚಿಕೆದಾರರು ನಿಗಮದ ಕ್ರಮವನ್ನು ಪ್ರಶ್ನಿಸಿ ದಾವೆಯನ್ನು ದಾಖಲು ಮಾಡಿದಲ್ಲಿ, ಘನ ನ್ಯಾಯಾಲಯವು ನಿಗಮದ ಪರವಾಗಿ ತೀರ್ಪು ನೀಡಿದಾಗ, ಹಂಚಿಕೆದಾರರ ಮನವಿಯನ್ನು ಪರಿಗಣಿಸದೆ, ನಿಯಮಾನುಸಾರ ಮರು ಹಂಚಿಕೆಗೆ ಪ್ರಕಟಣೆ ನೀಡಿ ಕ್ರಮಕೈಗೊಳ್ಳುವುದು.

5. <u>ಹಂಚಿಕೆದಾರರ ಸ್ವಾಧೀನದಲ್ಲಿರುವ ಮಳಿಗೆ / ನಿವೇಶನದ ರದ್ದತಿ ಆದೇಶ ನಿರಸನಗೊಳಿಸಿದ ನಂತರ ನಿರ್ವಹಿಸಬೇಕಾದ ಕ್ರಮ:-</u>

ಈ ಮೇಲೆ ಕೋಷ್ಟಕದಲ್ಲಿ ತಿಳಿಸಿದಂತೆ, ನಿಗಮವು ಹಂಚಿಕೆ ರದ್ದತಿ ಆದೇಶ ಹೊರಡಿಸಿರುವ / ಹೊರಡಿಸುವ ಹಂಚಿಕೆದಾರರಿಂದ ದಂಡ ಮತ್ತು ಶಾಸನಬದ್ಧ ಶುಲ್ಕಗಳನ್ನು ಪ್ರಚಲಿತ ತೆರಿಗೆಗಳೊಂದಿಗೆ ಪಾವತಿಸಿಕೊಂಡು, ವ್ಯವಸ್ಥಾಪಕ ನಿರ್ದೇಶಕರವರ ಅನುಮೋದನೆ ಪಡೆದು ರದ್ದತಿಯನ್ನು ನಿರಸನಗೊಳಿಸಿ ಹಂಚಿಕೆಯನ್ನು ಪುನರ್ ಸ್ಥಾಪನೆಗೊಳಿಸುವುದು (Restoration of allotment). ಪುನರ್ ಸ್ಥಾಪನೆ ಆದೇಶ ಪಡೆದ ಹಂಚಿಕೆದಾರರು, ಆದೇಶ ಪಡೆದ ಒಂದು ವರ್ಷದ ಕಾಲಾವಕಾಶದಲ್ಲಿ ನಿವೇಶನದಲ್ಲಿ ಕಡ್ಡಾಯವಾಗಿ ಕಟ್ಟಡ ನಿರ್ಮಿಸಿ ಕೈಗಾರಿಕೆಯನ್ನು ಪ್ರಾರಂಭಿಸುವ ಷರತ್ತನ್ನು ವಿಧಿಸುವುದು. ತಪ್ಪಿದಲ್ಲಿ ಹಂಚಿಕೆದಾರರು ಪಾವತಿಸಿದ ಎಲ್ಲಾ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು, ಮಳಿಗೆ / ನಿವೇಶನವನ್ನು ನಿಗಮದ ವಶಕ್ಕೆ ಪಡೆಯಲು ಯಾವುದೇ ಆಕ್ಷೇಪಣೆಯಿಲ್ಲದ ಬಗ್ಗೆ ಕಡ್ಡಾಯವಾಗಿ ಮುಚ್ಚಳಿಕೆ ಪತ್ರ ಪಡೆಯುವುದು.

6. <u>ನಿಗಮದ ಸ್ವಾಧೀನದಲ್ಲಿರುವ ಮಳಿಗೆ/ನಿವೇಶನದ ರದ್ದತಿ ಆದೇಶ ನಿರಸನಗೊಳಿಸಿದ ನಂತರ ನಿರ್ವಹಿಸಬೇಕಾದ ಕ್ರಮ:</u>

ನಿಗಮದ ಸ್ವಾಧೀನದಲ್ಲಿರುವ ಮಳಿಗೆ/ನಿವೇಶನದ ಹಂಚಿಕೆದಾರರಿಂದ ದಂಡ ಮತ್ತು ಶಾಸನಬದ್ಧ ಶುಲ್ಕಗಳನ್ನು ಪ್ರಚಲಿತ ತೆರಿಗೆಗಳೊಂದಿಗೆ ಪಾವತಿಸಿಕೊಂಡು, ವ್ಯವಸ್ಥಾಪಕ ನಿರ್ದೇಶಕರವರ ಅನುಮೋದನೆ ಪಡೆದು ರದ್ದತಿಯನ್ನು ನಿರಸನಗೊಳಿಸಿ ಹಂಚಿಕೆಯನ್ನು ಪುನರ್ ಸ್ಥಾಪನೆಗೊಳಿಸಿ (Restoration of allotment), ಮಳಿಗೆ/ನಿವೇಶನದ ಮರು-ಸ್ವಾಧೀನ ನೀಡುವುದು. ಮಳಿಗೆ/ನಿವೇಶನದ ಮರು-ಸ್ವಾಧೀನ ಪಡೆದ ಹಂಚಿಕೆದಾರರು, ಆದೇಶ ಪಡೆದ ಒಂದು ವರ್ಷ ಕಾಲಾವಕಾಶದಲ್ಲಿ ಕಡ್ಡಾಯವಾಗಿ ಮಳಿಗೆಯಲ್ಲಿ ಕಾರ್ಯಾಚರಣೆ ಪ್ರಾರಂಭಿಸುವುದು ಮತ್ತು ನಿವೇಶನದ ಹಂಚಿಕೆದಾರರು ಕಟ್ಟಡ ನಿರ್ಮಿಸಿ/ಕೈಗಾರಿಕೆಯನ್ನು ಪ್ರಾರಂಭಿಸುವ ಷರತ್ತನ್ನು ವಿಧಿಸುವುದು. ತಪ್ಪಿದಲ್ಲಿ ಹಂಚಿಕೆದಾರರು ಪಾವತಿಸಿದ ಎಲ್ಲಾ ಮೊತ್ತವನ್ನು ಮುಟ್ಟುಗೋಲು

ಹಾಕಿಕೊಂಡು, ಮಳಿಗೆ /ನಿವೇಶನವನ್ನು ನಿಗಮದ ವಶಕ್ಕೆ ಪಡೆಯಲು ಯಾವುದೇ ಆಭ್ಯಂತರವಿಲ್ಲದ ಬಗ್ಗೆ ಕಡ್ಡಾಯವಾಗಿ ಮುಚ್ಚಳಿಕೆ ಪತ್ರ ಪಡೆಯುವುದು.

7. **ಪುನರ್ ಸ್ಥಾಪನ ಆದೇಶ ಪಡೆದ ನಂತರ ಕಟ್ಟಡ ನಿರ್ಮಿಸದೆ / ಕೈಗಾರಿಕಾ ಕಾರ್ಯಾಚರಣೆ ನಡೆಸದಿರುವ ಘಟಕಗಳಿಗೆ ನಿರ್ವಹಿಸಬೇಕಾದ ಕ್ರಮ:-**

ಹಂಚಿಕೆದಾರರು ದಂಡವನ್ನು ಪಾವತಿಸಿ ನಿಗದಿಪಡಿಸಿರುವ ಒಂದು ವರ್ಷ ಕಾಲಾವಧಿಯಲ್ಲಿ ಪುನರ್ ಸ್ಥಾಪನೆಗೊಂಡ ಮಳಿಗೆಯಲ್ಲಿ ಕಾರ್ಯಾಚರಣೆ/ನಿವೇಶನದಲ್ಲಿ ಕಟ್ಟಡ ನಿರ್ಮಿಸಿ ಕೈಗಾರಿಕೆಯನ್ನು ಪ್ರಾರಂಭಿಸದೆ ಷರತ್ತನ್ನು ಉಲ್ಲಂಘಿಸಿದ ಸಂದರ್ಭದಲ್ಲಿ, ಅಂತಹ ಹಂಚಿಕೆದಾರರ ನಿವೇಶನ/ಮಳಿಗೆಯ ಹಂಚಿಕೆಯನ್ನು ರದ್ದುಗೊಳಿಸುವುದು. ಸದರಿ ಹಂಚಿಕೆದಾರರು ಪಾವತಿಸಿರುವ ಎಲ್ಲಾ ಪಾವತಿಗಳನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಮುಟ್ಟುಗೋಲು ಹಾಕಿಕೊಂಡು ಆದೇಶ ಹೊರಡಿಸಿ ಮಾಹಿತಿಯನ್ನು ಕಡ್ಡಾಯವಾಗಿ ನಿಗಮದ ಹಣಕಾಸು ವಿಭಾಗಕ್ಕೆ ಮಾಹಿತಿ ನೀಡುವುದು. ಹಾಗೂ ಸದರಿ ಮಳಿಗೆ/ನಿವೇಶನಗಳ ಹಂಚಿಕೆಗೆ ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆ ಪಡೆದು ಕ್ರಮ ಜರುಗಿಸುವುದು.

8. **ಪುನರ್‌ಸ್ಥಾಪನೆ ಆದೇಶ ಪಡೆದ ನಂತರ ಕಟ್ಟಡ ನಿರ್ಮಿಸಿ / ಕೈಗಾರಿಕಾ ಕಾರ್ಯಾಚರಣ ನಡೆಸುತ್ತಿರುವ ಘಟಕಗಳಿಗೆ ನಿರ್ವಹಿಸಬೇಕಾದ ಕ್ರಮ:-**

ನಿಗಮದ ಹಂಚಿಕೆ ನಿಯಮ ಮತ್ತು ಗುತ್ತಿಗೆ ಕರಾರು ಷರತ್ತುಗಳಂತೆ, ಈ ಮೇಲೆ ತಿಳಿಸಿರುವ ಕೋಷ್ಟಕದಂತೆ ದಂಡವನ್ನು ಪಾವತಿಸಿ ಪುನರ್ ಸ್ಥಾಪನೆ ಆದೇಶ/ಮರುಸ್ವಾಧೀನ ಪಡೆದು ಮಳಿಗೆ/ ನಿವೇಶನದಲ್ಲಿ ನಿಗದಿತ ಅವಧಿಯಲ್ಲಿ ಕೈಗಾರಿಕಾ ಕಾರ್ಯಾಚರಣೆ ನಡೆಸಿ ಗುತ್ತಿಗೆ ಕರಾರು ಅವಧಿ ಪೂರ್ಣಗೊಳಿಸಿರುವ ಘಟಕಗಳಿಗೆ ನಿಗಮದ ನಿಯಮಗಳನ್ವಯ ಕ್ರಮವನ್ನು ಜರುಗಿಸಿ ಕ್ರಯಪತ್ರವನ್ನು ವಿತರಿಸುವುದು.

9. **ಕಟ್ಟಡ ನಿರ್ಮಿಸದೆ / ಕೈಗಾರಿಕಾ ಕಾರ್ಯಾಚರಣ ನಡೆಸದಿರುವ ಘಟಕಗಳು:-**

ಹಂಚಿಕೆ ಪತ್ರ ಹಾಗೂ ಕರಾರು ಪತ್ರದ ನಿಯಮ ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿ ಅಂದರೆ ಹಂಚಿಕೆಯಾದ ನಿವೇಶನಗಳಲ್ಲಿ ಕಟ್ಟಡ ನಿರ್ಮಿಸದೆ/ಕೈಗಾರಿಕಾ ಕಾರ್ಯಾಚರಣೆ ನಡೆಸದಿರುವ ಎಲ್ಲಾ ಹಂಚಿಕೆಗಳನ್ನು ಕೆ.ಪಿ.ಪಿ. ಕಾಯ್ದೆಯನ್ವಯ ಕ್ರಮ ತೆಗೆದುಕೊಂಡು ಕೂಡಲೇ ರದ್ದುಗೊಳಿಸಿ, ಮಳಿಗೆ /ನಿವೇಶನಗಳನ್ನು ನಿಗಮದ ವಶಕ್ಕೆ ವಾಪಸ್ಸು ಪಡೆಯುವುದು ನಿಗಮದ ನಿಯಮವಾಗಿದ್ದು, ಈ ನಿಯಮವನ್ನು ವಿಭಾಗೀಯ ಕಛೇರಿಗಳು ಕಟ್ಟುನಿಟ್ಟಾಗಿ ನಿರ್ವಹಿಸಲು ಸೂಚಿಸಿದೆ.

ಮುಂದುವರೆದಂತೆ, ಈ ಆದೇಶ ತಲುಪಿದ 30 ದಿನಗಳೊಳಗಾಗಿ ಎಲ್ಲಾ ಸಹಾಯಕ ಪ್ರಧಾನ ವ್ಯವಸ್ಥಾಪಕರುಗಳು ಕಡ್ಡಾಯವಾಗಿ ಹಂಚಿಕೆಯಾಗಿ ಕಟ್ಟಡ ನಿರ್ಮಿಸದೇ ಇರುವ, ಕಟ್ಟಡ ನಿರ್ಮಿಸಿ ವಿದ್ಯುಚ್ಛಕ್ತಿ ಪಡೆಯದೇ ಇರುವ, ಕಾರ್ಯಾಚರಣೆ ನಡೆಸದೇ ಇರುವ, ನಿಗಧಿತ ಕರಾರು ಅವಧಿಯ ನಂತರ ಕಟ್ಟಡ ನಿರ್ಮಿಸಿ ವಿದ್ಯುಚ್ಛಕ್ತಿ ಪಡೆದು ಕಾರ್ಯಾಚರಣೆ ನಡೆಸುತ್ತಿರುವ ಹಾಗೂ ನಕ್ಷೆ ಅನುಮೋದನೆ ಪಡೆಯದೇ ಕಟ್ಟಡ ನಿರ್ಮಿಸಿ ಉದ್ಯಮ ನಡೆಸುತ್ತಿರುವ ಹಂಚಿಕೆದಾರರುಗಳಿಗೆ ನೋಟೀಸ್ ನೀಡಿ ನೋಟೀಸ್ ತಲುಪಿದ 15 ದಿನಗಳೊಳಗೆ ಒಪ್ಪಿಗೆ ಪತ್ರವನ್ನು ಪಡೆದು ದಂಡ ಮತ್ತು ಶಾಸನಬದ್ಧ ತೆರಿಗೆ ಮತ್ತು ಇನ್ನಿತರೆ ಪಾವತಿಗಳನ್ನು ಪೂರ್ಣವಾಗಿ ಪಾವತಿಸಿಕೊಂಡು ವ್ಯವಸ್ಥಾಪಕ ನಿರ್ದೇಶಕರವರ ಅನುಮೋದನೆ ಪಡೆದು ಹಂಚಿಕೆ ರದ್ದತಿ ಆದೇಶವನ್ನು ನಿರಸನಗೊಳಿಸಿ (Restoration of allotment) ಹಂಚಿಕೆ ಪುನರ್ ಸ್ಥಾಪನೆಗೊಳಿಸಲು ಸೂಕ್ತ ಕ್ರಮ ಜರುಗಿಸುವುದು.

ಮುಂದುವರೆದಂತೆ, ಹಂಚಿಕೆಯಾದ ನಿವೇಶನಗಳಲ್ಲಿ ನಿಗಧಿತ ಅವಧಿಯಲ್ಲಿ ಕಟ್ಟಡವನ್ನು ನಿರ್ಮಿಸಲು ಪ್ರಾರಂಭಿಸದೇ ಅವಧಿ ಮುಗಿದ ನಂತರ ಕಟ್ಟಡ ನಿರ್ಮಿಸಲು ಪ್ರಾರಂಭಿಸಿರುವಂತಹ ಮತ್ತು ಅರೆ ನಿರ್ಮಾಣದಲ್ಲಿರುವ ಹಂತದಲ್ಲಿರುವ ಘಟಕಗಳಿಗೆ ಹಾಗೂ ಕಟ್ಟಡ ನಿರ್ಮಿಸಿ ವಿದ್ಯುಚ್ಛಕ್ತಿ ಪಡೆಯದೆ ಇರುವಂತಹ ಹಾಗೂ ವಿದ್ಯುಚ್ಛಕ್ತಿ ಪಡೆದು ಕಾರ್ಯ ನಿರ್ವಹಿಸದೇ ಇರುವ ಘಟಕಗಳಿಗೆ ಇಂದಿನಿಂದ ಅಂದರೆ ದಿನಾಂಕ 01.10.2020 ರಿಂದ ಒಂದು ವರ್ಷದೊಳಗೆ ಕಟ್ಟಡ ನಿರ್ಮಾಣವನ್ನು ಪೂರ್ಣಗೊಳಿಸಿ, ವಿದ್ಯುಚ್ಛಕ್ತಿ ಪಡೆದು ಕೈಗಾರಿಕೆಯನ್ನು ಪೂರ್ಣ ಪ್ರಮಾಣದಲ್ಲಿ ನಡೆಸುವಂತಹ ಘಟಕಗಳಿಗೆ ಮೇಲ್ಕಂಡ ತಃಖ್ತೆಯ[illegible] [illegible]

ಕಛೇರಿ ಆದೇಶದ ಪ್ರಕಾರ ಹಂಚಿಕೆ ಪುನರ್ ಸ್ಥಾಪನೆಗೊಂಡ ನಂತರ ಒಂದು ವರ್ಷದೊಳಗೆ ಕಟ್ಟಡ ನಿರ್ಮಾಣವನ್ನು ಪೂರ್ಣಗೊಳಿಸಿ, ವಿದ್ಯುಚ್ಛಕ್ತಿ ಪಡೆದು ಕೈಗಾರಿಕೆಯನ್ನು ಪೂರ್ಣ ಪ್ರಮಾಣದಲ್ಲಿ ನಡೆಸುವಂತಹ ಘಟಕಗಳಿಗೆ ಕ್ರಯಪತ್ರ ನೀಡುವ ಸಂದರ್ಭದಲ್ಲಿ ನಿಗದಿಪಡಿಸಿದ್ದ ಶೇ.10 ರಷ್ಟು ಚಾಲ್ತಿ ದರದ ದಂಡದ ಪ್ರಮಾಣವನ್ನು ಕೋವಿಡ್-19 ಇರುವ ಹಿನ್ನೆಲೆಯಲ್ಲಿ ದಿನಾಂಕ: 30.09.2021 ರವರೆಗೆ ರಿಯಾಯಿತಿ ನೀಡಿದೆ. ತದನಂತರ ಕ್ರಯಪತ್ರ ನಿರ್ವಹಿಸಿಕೊಳ್ಳುವ ಹಂಚಿಕೆದಾರರುಗಳಿಗೆ ದಿನಾಂಕ: 08-05-2020ರ ಕೋಷ್ಟಕದಲ್ಲಿ ತಿಳಿಸಿದ ಕ್ರಯಪತ್ರ ನಿರ್ವಹಿಸಿಕೊಳ್ಳುವ ಸಂದರ್ಭದಲ್ಲಿ ವಿಧಿಸುವ ಶೇ.10 ರಷ್ಟು ಚಾಲ್ತಿ ದರದ ದಂಡ ಮತ್ತು ತೆರಿಗೆಯನ್ನು ವಿಧಿಸಿ ಪಾವತಿಸಿಕೊಳ್ಳಲು ಕ್ರಮಕೈಗೊಳ್ಳುವುದು.

ಈ ಆದೇಶ ವಿಶ್ವ ಮಳಿಗೆಯ ಹಂಚಿಕೆಗೆ ಅನ್ವಯಿಸುವುದಿಲ್ಲ. ಈ ಸೌಲಭ್ಯವನ್ನು ಒಮ್ಮೆ ಮಾತ್ರ ವಿಸ್ತರಿಸುವುದು ಹಾಗೂ ಯಾವುದೇ ಕಾರಣಕ್ಕೂ ವಿಸ್ತರಣೆಗೆ ಅವಕಾಶವಿರುವುದಿಲ್ಲ.

ಈ ಆದೇಶವು ದಿನಾಂಕ 01.10.2020 ರಿಂದ ಅನ್ವಯವಾಗುವಂತೆ ದಿನಾಂಕ: 30-09-2021 ರವರೆವಿಗೆ ಚಾಲ್ತಿಯಲ್ಲಿರುತ್ತದೆ. ನಿಗಮದ ಸಂಬಂಧಪಟ್ಟ ಎಲ್ಲಾ ಇಲಾಖಾ/ವಿಭಾಗ/ಶಾಖಾ ಮುಖ್ಯಸ್ಥರುಗಳು ಸದರಿ ಆದೇಶದಲ್ಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಹಾಗೂ ಕಡ್ಡಾಯವಾಗಿ ಪಾಲಿಸತಕ್ಕದ್ದು.

ಮೇಲ್ಕಂಡ ಎಲ್ಲಾ ಪ್ರಕರಣಗಳಿಗೆ ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆ ಪಡೆದು ರಿಯಾಯಿತಿಯನ್ನು ವಿಸ್ತರಿಸಲು ಸೂಚಿಸಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,

1. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ) ಬೆಂಗಳೂರು ವಿಭಾಗ, ಕರಾಸಕೈಅನಿನಿ, ಬೆಂಗಳೂರು/ ತುಮಕೂರು / ಹುಬ್ಬಳ್ಳಿ / ಬೆಳಗಾವಿ/ ಕಲಬುರಗಿ/ ಮೈಸೂರು / ಶಿವಮೊಗ್ಗ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಪೀಣ್ಯಾ/ ದಾವಣಗೆರೆ/ ಮಂಗಳೂರು/ ಬಳ್ಳಾರಿ.

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ಕೈವ)/(ಆಡಳಿತ, ಭೂಸ್ವಾಧೀನ) ಕರಾಸಕೈಅನಿನಿ, ಬೆಂಗಳೂರು.
2. ಉಪ ಪ್ರಧಾನ ವ್ಯವಸ್ಥಾಪಕರು, ಪ-1 (ಹಣಕಾಸು)/(ಆ.ಲೆ.ಪ) ಕರಾಸಕೈಅನಿನಿ, ಬೆಂಗಳೂರು.
3. ಸಹಾಯಕ ಪ್ರಧಾನ ವ್ಯವಸ್ಥಾಪಕರು (ವ&ಕಾಲೆ)/(ಪಾ.ಲೆ) ಕರಾಸಕೈಅನಿನಿ, ಬೆಂಗಳೂರು
4. ಕಂಪನಿ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.
5. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.
6. ಅಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು.
7. ವ್ಯ.ನಿ.,ರವರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು.
8. ವ್ಯವಸ್ಥಾಪಕರು (ಇಡಿಪಿ), ಕರಾಸಕೈಅನಿನಿ, ಬೆಂಗಳೂರು, ರವರಿಗೆ ಈ ಆದೇಶವನ್ನು ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
9. ಜಿಲ್ಲಾ ಕೈಗಾರಿಕಾ ಕೇಂದ್ರಗಳು.
10. ಕೈಗಾರಿಕಾ ಸಂಘ ಸಂಸ್ಥೆಗಳು.

ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ:080-23407011-25 ಇ-ಮೈಲ್:kssidcho@gmail.com ವೆಬ್‌ಸೈಟ್:www.kssidc.co.in

ಸಂಖ್ಯೆ::ಕೈವ:ನಿರ್ವಹಣಾನೀತಿ:ಮಾರ್ಗಸೂಚಿ:2023-24 ದಿನಾಂಕ: 27-10-2023

## ಕಛೇರಿ ಆದೇಶ

ವಿಷಯ: ಕೈಗಾರಿಕಾ ವಸಾಹತು ನಿರ್ವಹಣಾ ನೀತಿಗೆ ಮಾರ್ಗಸೂಚಿಗಳ ಪರಿಷ್ಕರಣೆ ಕುರಿತು.

ಉಲ್ಲೇಖ:
1. ಕಛೇರಿ ಆದೇಶ ಸಂಖ್ಯೆ ಕೈವ :ನಿರ್ವಹಣಾನೀತಿ :ಮಾರ್ಗಸೂಚಿ : 2020/23/1355 ದಿನಾಂಕ 01.10.2020.
2. ಕಛೇರಿ ಆದೇಶ ಸಂಖ್ಯೆ ಕೈವ :ನಿರ್ವಹಣಾನೀತಿ :ಮಾರ್ಗಸೂಚಿ : 2020/1126 ದಿನಾಂಕ 03.01.2022
3. ದಿನಾಂಕ 14.11.2022ರಂದು ಜರುಗಿದ ನಿಗಮದ 368ನೇ ಮಂಡಳಿ ಸಭೆಯ ನಡವಳಿಗಳು.
4. ಕಛೇರಿ ಆದೇಶ ಸಂಖ್ಯೆ ಕೈವ :ನಿರ್ವಹಣಾನೀತಿ :ಮಾರ್ಗಸೂಚಿ : 2022-23 ದಿನಾಂಕ 08.12.2022
5. ದಿನಾಂಕ 07.09.2023ರಂದು ಜರುಗಿದ ನಿಗಮದ 370ನೇ ಮಂಡಳಿ ಸಭೆಯ ನಡವಳಿಗಳು.

------

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ದಿನಾಂಕ 07.09.2023 ರಂದು ಜರುಗಿದ ನಿಗಮದ 370ನೇ ಮಂಡಳಿ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನವಾಗಿರುತ್ತದೆ.

« ಮಂಡಳಿಯು ಸುದೀರ್ಘವಾಗಿ ಚರ್ಚಿಸಿ, ಹಂಚಿಕೆದಾರರ ಮನವಿಯನ್ನು ಪರಿಗಣಿಸಿ, ನಿಗಮದ 368ನೆ ಮಂಡಳಿ ನಿರ್ಧಾರದಂತೆ ದಿನಾಂಕ 08.12.2022 ರಂದು ಹೊರಡಿಸಿರುವ ಹಂಚಿಕೆ ಪುನರ್‌ಸ್ಥಾಪನೆ ಆದೇಶವನ್ನು ಮುಂದುವರೆಸಿ, ಕ್ರಯಪತ್ರ ವಿತರಿಸುವ ಸಂದರ್ಭದಲ್ಲಿ ವಿಧಿಸುತ್ತಿದ್ದ ಶೇ. 10 ರಷ್ಟು ರಿಯಾಯಿತಿ ನೀಡಿ ಹಾಗೂ ಹಂಚಿಕೆ ಪುನರ್ ಸ್ಥಾಪನೆ ನೀತಿಯನ್ನು ದಿನಾಂಕ 31.03.2024ರ ವರೆಗೆ ಮುಂದುವರೆಸಲು ಅನುಮೋದನೆ ನೀಡಿತು.»

ನಿಗಮದ 370ನೇ ಮಂಡಳಿ ನಿರ್ಣಯದಂತೆ, ಉಲ್ಲೇಖ (4)ರಲ್ಲಿ ಹೊರಡಿಸಿರುವ ಆದೇಶವನ್ನು ಪರಿಷ್ಕರಿಸಿ ನಿಗಮವು ಹಂಚಿಕೆ ಪುನರ್ ಸ್ಥಾಪನೆ ನೀತಿ ಅನ್ವಯ ಕ್ರಯಪತ್ರ ವಿತರಿಸುವ ಸಂದರ್ಭದಲ್ಲಿ ವಿಧಿಸುತ್ತಿದ್ದ ಶೇ.10ರಷ್ಟು ಚಾಲ್ತಿ ದರದ ದಂಡವನ್ನು ಈ ಕಛೇರಿ ಆದೇಶ ದಿನಾಂಕದಿಂದ ರಿಯಾಯಿತಿ ನೀಡಿ ಹಂಚಿಕೆ ಪುನರ್ ಸ್ಥಾಪನೆ ನೀತಿಯನ್ನು ದಿನಾಂಕ 31.03.2024ರವರೆಗೆ ವಿಸ್ತರಿಸಲಾಗಿದೆ. ಉಲ್ಲೇಖ (1)ರಲ್ಲಿನ ಆದೇಶದಲ್ಲಿನ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು, ಈ ಆದೇಶದ ಪ್ರಕಾರ ಸಹಾಯಕ ಪ್ರಧಾನ ವ್ಯವಸ್ಥಾಪಕರುಗಳು ಮತ್ತು ಸಂಬಂಧಪಟ್ಟ ಶಾಖಾ ಕಛೇರಿಯ ಅಧಿಕಾರಿಗಳು ಹಂಚಿಕೆ / ಕರಾರು ನಿಬಂಧನೆಗಳನ್ನು ಉಲ್ಲಂಘಿಸಿದ ಹಂಚಿಕೆದಾರರುಗಳಿಗೆ ತಪ್ಪದೆ ಪತ್ರ ಬರೆದು ಹಂಚಿಕೆ ಪುನರ್ ಸ್ಥಾಪನೆ ಅವಕಾಶವನ್ನು ಉಪಯೋಗಿಸಿಕೊಂಡು ಉದ್ದಿಮೆ ಪ್ರಾರಂಭ ಮಾಡುವಂತೆ ನೋಟೀಸ್ ಜಾರಿಗೊಳಿಸಿ ಹಂಚಿಕೆದಾರರುಗಳಿಂದ ನಿಗಧಿತ ದಂಡ ಪಾವತಿಸಿಕೊಂಡು, ನಿಯಮಾನುಸಾರ ಹಂಚಿಕೆ ಪುನರ್ ಸ್ಥಾಪನೆಗೊಳಿಸಲು (Restoration of Allotment) ಸೂಕ್ತ ಕ್ರಮ ಜರುಗಿಸುವುದು. ಈ ತರಹದ ಯಾವುದೇ ಪ್ರಕರಣಗಳು ಬಾಕಿ ಉಳಿಯದಂತೆ ನೋಟೀಸ್ ಜಾರಿಗೊಳಿಸಿ ಕ್ರಮವಹಿಸಲು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

ಉಲ್ಲೇಖ (4)ರ ಆದೇಶದಂತೆ, ಈಗಾಗಲೇ ಕ್ರಯಪತ್ರ ವಿತರಿಸುವ ಮೊದಲು ಪಾವತಿಸಬೇಕಾಗಿದ್ದ ದಂಡವನ್ನು ಹಂಚಿಕೆದಾರರು ಈಗಾಗಲೇ ಪಾವತಿಸಿದ್ದಲ್ಲಿ, ಸದರಿ ಮೊತ್ತವನ್ನು ಹಿಂದಿರುಗಿಸಲು ಅವಕಾಶವಿರುವುದಿಲ್ಲ. ಈ ಸಂಬಂಧ ಸಹಾಯಕ ಪ್ರಧಾನ ವ್ಯವಸ್ಥಾಪಕರು/ವ್ಯವಸ್ಥಾಪಕರು ತಮ್ಮ ಹಂತದಲ್ಲಿಯೇ ಹಿಂಬರಹ ನೀಡಲು ಸೂಚಿಸಿದೆ.

ಮುಂದುವರೆದು, ಹಂಚಿಕೆ ಪುನರ್ ಸ್ಥಾಪನೆ ನೀತಿಯ ಪ್ರಯೋಜನವನ್ನು ಪಡೆಯುವ ಬಗ್ಗೆ ಜಿಲ್ಲಾ ಕೈಗಾರಿಕಾ ಕೇಂದ್ರ ಮತ್ತು ಸ್ಥಳೀಯ ನೊಂದಾಯಿತ ಕೈಗಾರಿಕಾ ಸಂಸ್ಥೆಗಳಿಗೆ ಲಿಖಿತವಾಗಿ ಮಾಹಿತಿ ನೀಡುವಂತೆಯೂ ಸೂಚಿಸಿದೆ.

ಈ ಆದೇಶವು ತಕ್ಷಣದಿಂದ ದಿನಾಂಕ 31.03.2024ರವರೆಗೆ ಜಾರಿಯಲ್ಲಿರುತ್ತದೆ.

ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,

1. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ), ಕರಾಸಕೈಅನಿನಿ, ಬೆಂಗಳೂರು/ತುಮಕೂರು/ಮೈಸೂರು/ಶಿವಮೊಗ್ಗ/ಹುಬ್ಬಳ್ಳಿ/ಬೆಳಗಾವಿ/ಕಲಬುರಗಿ ಅವರ ಮಾಹಿತಿಗಾಗಿ ಹಾಗೂ ಅವಶ್ಯ ಕ್ರಮಗಳಿಗಾಗಿ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ದಾವಣಗೆರೆ/ಬಳ್ಳಾರಿ ಅವರ ಮಾಹಿತಿಗಾಗಿ ಹಾಗೂ ಅವಶ್ಯ ಕ್ರಮಗಳಿಗಾಗಿ.

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ಕೈವ)/(ಆಡಳಿತ, ಭೂಸ್ವಾಧೀನ)/(ಹಣಕಾಸು) ಕರಾಸಕೈಅನಿನಿ, ಬೆಂಗಳೂರು.
2. ಉಪ ಪ್ರಧಾನ ವ್ಯವಸ್ಥಾಪಕರು (ಆ.ಲೆ.ಪ)/(ಕೈವ)ವ-1&2 ಕರಾಸಕೈಅನಿನಿ, ಬೆಂಗಳೂರು.
3. ಸಹಾಯಕ ಪ್ರಧಾನ ವ್ಯವಸ್ಥಾಪಕರು (ಹಣಕಾಸು)/(ಸಮನ್ವಯ) ಕರಾಸಕೈಅನಿನಿ, ಬೆಂಗಳೂರು.
4. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.